ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಂಘ ಸಂಸ್ಥೆಗಳ ಬಗ್ಗೆ

೧೦(೧೪೪೧) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಸ್ಥೆಗಳಿವೆ (ಅದರ ವಿವರ ಒದಗಿಸುವುದು)

ಆ) ೧೯೪೪–೪೫, ೧೯೪೫–೪೬ನೇ ಡಿಸೆಂಬರ್ ಅಖೈರುವರೆಗೆ ಎಷ್ಟು ಸಹಕಾರ ಸಂಘಗಳು ಲಾಭದಲ್ಲಿವೆ ಹಾಗೂ ಎಷ್ಟು ನಷ್ಟದಲ್ಲಿವೆ?

ಇ) ಸಹಕಾರ ಸಂಘಗಳ ಪೈಕಿ ಯಾವುದರಲ್ಲಿ ಹಣ ದುರುಪಯೋಗವಾಗಿದೆ ಹಾಗೂ ಆ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೦ನೇ ಜೂನ್ ೧೯೪೬ರ ಅಂತ್ಯಕ್ಕೆ ಒಟ್ಟು ೧,೧೧೪ ಸಹಕಾರ ಸಂಘಗಳು ಇರುತ್ತವೆ. ಅವುಗಳ ವಿವರಗಳು ಈ ಕೆಳಕಂಡಂತಿರುತ್ತದೆ.

೧.	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್	೧
೨.	ವ್ಯವಸಾಯ ಪತ್ತಿನ ಸಹಕಾರ ಸಂಘಗಳು	೧೪೭
೩.	ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳು	೭೦
೪.	ಬೇಸಾಯ ಸಹಕಾರ ಸಂಘಗಳು	೧೭
೫.	ಮಾರುಕಟ್ಟೆ ಸಹಕಾರ ಸಂಘಗಳು	೮
೬.	ಸಂಸ್ಕರಣಾ ಸಹಕಾರ ಸಂಘಗಳು	೩
೭.	ಬಳಕೆದಾರರ ಸಹಕಾರ ಸಂಘಗಳು	೧೨೨
೮.	ವಸತಿ ಗೃಹ ಸಹಕಾರ ಸಂಘಗಳು	೬೮
೯.	ಔದ್ಯೋಗಿಕ ಸಹಕಾರ ಸಂಘಗಳು	೨೨೩
೧೦.	ಹಾಲು ಉತ್ಪಾದಕರ ಸಹಕಾರ ಸಂಘಗಳು	೨೧೫
೧೧.	ಸಮಾಪನೆಯಲ್ಲಿರುವ ಸಹಕಾರ ಸಂಘಗಳು	೧೧೧
೧೨.	ಇತರ ಸಹಕಾರ ಸಂಘಗಳು	೪೯
		೧,೧೧೪

ಆ) ಡಿಸೆಂಬರ್ ಅಂತ್ಯವು ಈ ಅವಧಿಗೆ ಸಹಕಾರ ಸಂಘಗಳು ತಮ್ಮ ಲೆಕ್ಕ ಪತ್ರಗಳನ್ನು ಸಹಕಾರಿ ವರ್ಷದ ಮಧ್ಯವಾದುದರಿಂದ ಲಾಭ ನಷ್ಟದಲ್ಲಿರುವ ಸಹಕಾರ ಸಂಘಗಳ ಸಂಖ್ಯೆಯನ್ನು ಅಖೈರುಗೊಳಿಸದೆ ೪೪–೪೫ ಮತ್ತು ೪೫–೪೬ನೇ ಸಹಕಾರ ಪಾರ್ಷಿಕ ಸಾಲಿನಲ್ಲಿ ಒದಗಿಸಲು ಸಾಧ್ಯವಾಗುವುದಿಲ್ಲ. ಸಂಘಗಳ ಕಾರ್ಯನಿರ್ವಹಣೆಯ ಫಲಿತಾಂಶಗಳು ಈ ಕೆಳಕಂಡಂತಿವೆ.

ವರ್ಷ	ಲಾಭ ಗಳಿಸಿದ ಸಹಕಾರ ಸಂಘಗಳ ಸಂಖ್ಯೆ	ನಷ್ಟ ಗಳಿಸಿದ ಸಹಕಾರ ಸಂಘಗಳ ಸಂಖ್ಯೆ
೧೯೪೪–೪೫	೪೪೩	೫೧೪
೧೯೪೫–೪೬	೪೬೫	೫೩೪

ಇ) ಲಭ್ಯವಿರುವ ಮಾಹಿತಿ ಪ್ರಕಾರ ೯೭ ಸಹಕಾರ ಸಂಘಗಳಲ್ಲಿ ೧೨೪ ಹಣ ದುರುಪಯೋಗದ ಪ್ರಕರಣಗಳು ಗಮನಕ್ಕೆ ಬಂದಿವೆ. ೪೭ ಕ್ರಿಮಿನಲ್ ಮೊಕದ್ದಮೆ ಹಾಗೂ ೯೪ ಸಿವಿಲ್ ಮೊಕದ್ದಮೆಗಳನ್ನು ಹೂಡಲಾಗಿದೆ. ಉಳಿದ ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಯಾವ ಯಾವ ಸಹಕಾರ ಸಂಘದಲ್ಲಿ ಎಷ್ಟೆಷ್ಟು ದುರುಪಯೋಗ ಆಗಿದೆ, ಏನು ಕ್ರಮ ಕೈಗೊಂಡಿದೆ ಎಂಬ ಪಟ್ಟಿ ಮಾಡಿಸಿದ್ದೇನೆ. ಮಾನ್ಯ ಸದಸ್ಯರಿಗೆ ಅದನ್ನು ಕಳುಹಿಸಿಕೊಡುತ್ತಿದ್ದೇವೆ. ಪೂರ್ತಿ ವಿವರಗಳು ಅದರಲ್ಲಿವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ೧೯೮೪-೮೫ರಲ್ಲಿ ೫೧೮ ಸಹಕಾರ ಸಂಘಗಳಲ್ಲಿ, ೧೯೮೫-೮೬ರಲ್ಲಿ ೫೩೮ ಸಹಕಾರ ಸಂಘಗಳಲ್ಲಿ ನಷ್ಟ ಬಂದಿದೆ ಎಂದು ತಿಳಿಸುತ್ತಿದ್ದಾರೆ. ಈ ರೀತಿ ನಷ್ಟ ಆಗುತ್ತಿರುವ ಬಗ್ಗೆ ತನಿಖೆ ಮಾಡಿ ತೀರಾ ನಷ್ಟದಲ್ಲಿರುವ ಸಂಸ್ಥೆಗಳನ್ನು ಮುಚ್ಚುವಂಥ ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದೀಚೆಗೆ ಸುಮಾರು ೪ ಸಾವಿರ ಸಂಘಗಳನ್ನು ಸಮಾಪನೆಗೊಳಿಸಿದ್ದೇವೆ. ೧೧೧ ಸಹಕಾರ ಸಂಘಗಳನ್ನು ನಿಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲಿಕ್ವಿಡೇಟ್ ಮಾಡುತ್ತಿದ್ದೇವೆ. ಇನ್ನು ಯಾವ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅದನ್ನೂ ಮುಚ್ಚುವುದಕ್ಕೆ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ಕಡೆಯದಾಗಿ ಉತ್ತರ ಕೊಡುತ್ತಾ ೧೭ ಸಹಕಾರ ಸಂಘಗಳಲ್ಲಿ ೧೨ಳ ಹಣ ದುರುಪಯೋಗದ ಪ್ರಕರಣಗಳು ಗಮನಕ್ಕೆ ಬಂದಿವೆ, ೮೭ ಕ್ರಿಮಿನಲ್ ಮೊಕದ್ದಮೆ ಹಾಗೂ ೯ಳ ಸಿವಿಲ್ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಹೇಳಿದ್ದಾರೆ. ಮೊಕದ್ದಮೆಗಳ ತನಿಖೆಯಾಗಿ ಈ ಸಹಕಾರ ಸಂಘಗಳಿಂದ ಹಣ ಜಮೆ ಆಗಿದೆಯೆ? ಎಷ್ಟು ಜನರಿಗೆ ಹೀಗಾಗಿದೆ? ಅದರ ಹೆಸರು ತಿಳಿಸಬಹುದಾ?

ಶ್ರೀ ಆರ್. ಎಲ್. ಜಾಲಪ್ಪ.—ಹಲವು ಸಂದರ್ಭಗಳಲ್ಲಿ ಹಣ ವಸೂಲಾಗಿದೆ. ಇನ್ನೂ ಹಲವು ಸಂದರ್ಭದಲ್ಲಿ ಹಣ ವಸೂಲಾಗುತ್ತಿಲ್ಲ. ಶಿತ್ತೋಳ್ ಸಹಕಾರ ಸಂಘದ ಬಗ್ಗೆ ಸಿ. ಒ. ಡಿ. ಗೆ ರೆಫರ್ ಮಾಡಿದ್ದೇವೆ. ವರದಿ ಇನ್ನೂ ಬಂದಿಲ್ಲ. ಉಳಿದ ಸೊಸೈಟಿಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದೇವೆ. ಯಾವ್ಯಾವ ಸಂಘಗಳಲ್ಲಿ ಹಣ ವಸೂಲಾಗಿದೆ? ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ೯೭ ಸಹಕಾರ ಸಂಘಗಳ ವಿಚಾರದಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ಅದನ್ನು ಮಾನ್ಯ ಸದಸ್ಯರು ನೋಡಬಹುದು.

ನೂಲಿನ ಗಿರಣಿಗಳ ಮಂಜೂರು ಬಗ್ಗೆ.

೧೧ (೧೯೦) ಶ್ರೀ ಕೆ. ಬಿ. ಕೊಳಿವಾಡ (ರಾಣಿ ಬೆನ್ನೂರು) ಈ ಕೆಳಕಂಡ ಪ್ರಶ್ನೆಗಳಿಗೆ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಎಷ್ಟು ಸಹಕಾರಿ ನೂಲಿನ ಗಿರಣಿಗಳು ಮಂಜೂರು ಆಗದೆ ಉಳಿದಿವೆ ?

ಆ) ಸದರಿ ನೂಲಿನ ಗಿರಣಿಗಳ ಮಂಜೂರಾತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಸದರಿ ಮಂಜೂರಾತಿ ಪಡೆಯದೆ ಇರತಕ್ಕಂಥ ನೂಲಿನ ಗಿರಣಿಗ ಲ್ಲಿ ಯಾವ ಯಾವ ನೂಲಿನ ಗಿರಣಿಗಳಿಗೆ ರಾಜ್ಯ ಸರ್ಕಾರ ಷೇರು ಹಣವನ್ನು ಬಿಡುಗಡೆ ಮಾಡಿದೆ ಮತ್ತು ಉಳಿದ ಗಿರಣಿ ಗಳಿಗೆ ಏಕೆ ಬಿಡುಗಡೆಮಾಡಿಲ್ಲ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಈಗಿನ ಮಾಹಿತಿಯ ಪ್ರಕಾರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಅನ್ವಯ, ೮ ಸಹಕಾರ ನೂಲಿನ ಗಿರಣಿಗಳು ಕರ್ನಾಟಕದಲ್ಲಿ ನೋಂದಣಿಯಾಗಿರುತ್ತವೆ. ಅದರೆ ಇವುಗಳ ಸ್ಥಾಪನೆಗೆ ಭಾರತ ಸರ್ಕಾರದಿಂದ ಪರವಾನಗಿಯನ್ನು ಪಡೆಯಬೇಕಾಗಿದೆ.

ಆ) ಆ ೮ ಸಹಕಾರ ನೂಲಿನ ಗಿರಣಿಗಳ ಪೈಕಿ ೪ ಸಹಕಾರ ನೂಲಿನ ಗಿರಣಿಗಳನ್ನು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ಬಿಡಿಸಿ ಹಿಂದೆಯೇ ಅಂದರೆ ೧೯೮೬ರಲ್ಲಿ ಶಿಫಾರಸ್ಸು ಮಾಡಲಾಗಿದೆ. ಮತ್ತೆ ಮೂರು ಸಹಕಾರ ನೂಲಿನ ಗಿರಣಿಗಳನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ ೧೯೮೭ರಲ್ಲಿ ಶಿಫಾರಸ್ಸು ಮಾಡಲಾಗಿದೆ.